# Kuvempu University Library

Jnana Sahyadri, Shankaraghatta

## News Paper Clipping Service from Digital Library

**Date: 19-06-2016**

| Sl. No. | Name of the Paper | No. of Clippings |
|---|---|---|
| 01 | Udayavani | 01 |
| 02 | Vijaya Karnataka | 01 |
| 03 | Deccan Herald | 01 |

## ■ ಸಂಗೀತ ವಿವಿ ರಿಜಿಸ್ಟ್ರಾರ್ ವಿರುದ್ಧ ವೀಸಿ ದೂರು

ಮೈಸೂರು: ನಮ್ಮದೇ ವಿವಿಯ ಕುಲಸಚಿವರು ನನಗೆ ಜೀವ ಬೆದರಿಕೆ ಹಾಕಿದ್ದಾರೆ ಎಂದು ಕರ್ನಾಟಕ ಸಂಗೀತ ವಿವಿ ಕುಲಪತಿ ಡಾ.ಸರ್ವಮಂಗಳಾ ಶಂಕರ್ ಅವರು ಕುಲಸಚಿವ ಪ್ರೊ.ಎ.ರಂಗಸ್ವಾಮಿ ವಿರುದ್ಧ ದೂರು ನೀಡಿದ್ದಾರೆ. 'ಜೂ.14ರಂದು ಸಂಜೆ ನನ್ನ ಕಚೇರಿಗೆ ಬಂದ ಪ್ರೊ.ಎ. ರಂಗಸ್ವಾಮಿ, ವೇತನ ನೀಡದಿರುವ ವಿಷಯದಲ್ಲಿ ಕೂಗಾಡಿ ಅಸಭ್ಯವಾಗಿ ವರ್ತಿಸಿದ್ದಾರೆ. ಪ್ರತಿದಿನ ತಮಗೆ ಮಾನಸಿಕವಾಗಿ ಚಿತ್ರಹಿಂಸೆ ನೀಡುತ್ತಿರುವ ನೀಡುತ್ತಿದ್ದು, ಜೀವ ಬೆದರಿಕೆಯಿದೆ' ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಒಂದೆಡೆ ಏರಿದ ಖರ್ಚು । ಇನ್ನೊಂದೆಡೆ ಐಟಿ ಇಲಾಖೆಯಿಂದ ದಂಡದ ಏಟು । 15 ದಿನದಲ್ಲಿ ಮತ್ತೆ 127 ಕೋಟಿ ದಂಡ ಕಟ್ಟುವಂತೆ ಐಟಿ ನೋಟಿಸ್

# ಹದಗೆಟ್ಟ ಆರ್ಥಿಕ ಸ್ಥಿತಿ: ಐಸಿಯುನಲ್ಲಿ ವಿಟಿಯು

ಎಂ.ಕೆ. ಹೆಗಡೆ ಬೆಳಗಾವಿ

ಏಷ್ಯಾದಲ್ಲೇ ಅತ್ಯಂತ ದೊಡ್ಡ ಮತ್ತು ಪ್ರತಿಷ್ಠಿತ ವಿಶ್ವವಿದ್ಯಾಲಯ ಎನ್ನುವ ಹೆಗ್ಗಳಿಕೆಗೆ ಪಾತ್ರವಾಗಿದ್ದ ವಿಶ್ವೇಶ್ವರಯ್ಯ ತಾಂತ್ರಿಕ ವಿವಿ ಈಗ ಬಹುದೊಡ್ಡ ಆರ್ಥಿಕ ಸಂಕಷ್ಟಕ್ಕೆ ಸಿಲುಕಿದೆ.

ಕಳೆದ 5 ವರ್ಷಗಳಲ್ಲಿ ಮಾಡಲಾದ ಬೇಕಾಬಿಟ್ಟಿ ಖರ್ಚು ಮತ್ತು ಆದಾಯ ತೆರಿಗೆ ಇಲಾಖೆ ನೀಡಿದ ಅನಿರೀಕ್ಷಿತ ಏಟಿನಿಂದ ಚೇತರಿಸಿಕೊಳ್ಳಲಾಗದ ಸ್ಥಿತಿಗೆ ವಿಟಿಯು ತಲುಪಿದೆ. 450 ಕೋಟಿ ರೂ. ಮುಟ್ಟುಗೋಲು ಹಾಕಿಕೊಂಡಿದ್ದ ಆದಾಯ ತೆರಿಗೆ ಇಲಾಖೆ ಮತ್ತೆ 127 ಕೋಟಿ ರೂ. ದಂಡ ಮತ್ತು ಬಡ್ಡಿ ಪಾವತಿಸುವಂತೆ ವಿವಿಗೆ ನೋಟಿಸ್ ನೀಡಿದೆ. ವೇತನ ಮತ್ತು ನಿರ್ವಹಣಾ ವೆಚ್ಚಕ್ಕೇ ಪರದಾಡುತ್ತಿರುವ ವಿವಿಗೆ ಇದು ಮತ್ತೊಂದು ಶಾಕ್.

1997ರಲ್ಲಿ ಆರಂಭವಾದ ವಿವಿ ವಾರ್ಷಿಕ 160 ಕೋಟಿ ರೂ. ಆದಾಯ ಹೊಂದಿದ್ದು, ವಿವಿಗೆ ಇದೇ ಮುಳುವಾಗಿ ಪರಿಣಮಿಸಬಹುದೆನ್ನುವ ಸಣ್ಣ ಯೋಚನೆಯನ್ನೂ ಮಾಡದ ಕುಲಪತಿ ಮತ್ತು ಕಾರ್ಯಕಾರಿ ಮಂಡಳಿಯಿಂದಾಗಿ ಈಗ ದೊಡ್ಡ ಸಂಕಷ್ಟ ಎದುರಾಗಿದೆ.

**ಆಗಿದ್ದೇನು?:** ವಿಟಿಯು 212 ತಾಂತ್ರಿಕ ಕಾಲೇಜುಗಳ ಸಂಲಗ್ನ ಹೊಂದಿದೆ. ಬಂದ ಆದಾಯವನ್ನು ಅಸಮರ್ಪಕವಾಗಿ ಕೂಡಿಟ್ಟ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಇಲಾಖೆಯ ಕಣ್ಣು ಬಿತ್ತು. ಆ ಹಣವನ್ನು ಲಾಭ ಎಂದು ಪರಿಗಣಿಸಿ, 2004ರಿಂದ 2014ರ ಅವಧಿಗೆ 450 ಕೋಟಿ ರೂ. ತೆರಿಗೆ ಕಟ್ಟುವಂತೆ ನೋಟಿಸ್ ಜಾರಿ ಮಾಡಿತು. 'ಇದೊಂದು ಶಿಕ್ಷಣ ಸಂಸ್ಥೆ, ಲಾಭದ ಉದ್ಯಮವಲ್ಲ, ಹಾಗಾಗಿ ತೆರಿಗೆ ವ್ಯಾಪ್ತಿಗೆ ಬರುವುದಿಲ್ಲ' ಎನ್ನುವ ವಾದ ಮಂಡಿಸಲಾಯಿತು. ಆದರೆ ಆದಾಯ ತೆರಿಗೆ ಇಲಾಖೆ, 'ಸರಕಾರದಿಂದ ವಿವಿ ಅನುದಾನ ಪಡೆಯುತ್ತಿಲ್ಲ' ಎನ್ನುವ ಪ್ರತಿವಾದ ಹೂಡಿತು. ಕೊನೆಗೆ ಸರ್ವೋಚ್ಚ ನ್ಯಾಯಾಲಯ ಕೂಡ ವಿವಿ ಪರವಾಗಿ ನಿಲ್ಲಲಿಲ್ಲ. ಹಾಗಾಗಿ ಖಾತೆಯಲ್ಲಿದ್ದ 450 ಕೋಟಿ ರೂ. ಆದಾಯ ತೆರಿಗೆ ಇಲಾಖೆಯ ಪಾಲಾಯಿತು.

**ಬೇಕಾಬಿಟ್ಟಿ ಖರ್ಚು:** ನಂತರವೂ ವಿವಿ ಎಚ್ಚೆತ್ತುಕೊಳ್ಳಲಿಲ್ಲ, ಆದಾಯ ಮತ್ತು ಖರ್ಚನ್ನು ತಾಳೆ ಹಾಕದೆ ಬೇಕಾಬಿಟ್ಟಿಯಾಗಿ ಹಣ ವ್ಯಯಿಸಿದೆ. ಸುಮಾರು 500 ಕೋಟಿ ರೂ.ಗಳಷ್ಟು ಹಣವನ್ನು ಕಟ್ಟಡಗಳಿಗಾಗಿ ವಿನಿಯೋಗಿಸಿದೆ. ಪರಿಣಾಮವಾಗಿ 150 ಕೋಟಿ ರೂ.ಗಳಷ್ಟು ಬೃಹತ್ ಮೊತ್ತ ಬಾಕಿ ಉಳಿದಿದೆ. ಅಲ್ಲದೆ ಕಟ್ಟಿದ ಕಟ್ಟಡ ಬಳಸಬೇಕೆಂದರೆ ಇನ್ನೂ 50 ಕೋಟಿ ರೂ. ಖರ್ಚು ಮಾಡಬೇಕಿದೆ. ಹಾಗಾಗಿ ಸುಮಾರು 200 ಕೋಟಿ ಕೊರತೆಯಲ್ಲಿ ವಿವಿ ಬಳಲುತ್ತಿದೆ. ಪರಿಣಾಮ ಈಗ ಸಂಬಳ ಪಾವತಿ ಮತ್ತು ಸಾಮಾನ್ಯ ನಿರ್ವಹಣೆಗೂ ಹಣವಿಲ್ಲ.

ಇಷ್ಟೊಂದು ಸಂಕಷ್ಟದಲ್ಲಿರುವಾಗಲೇ ಆದಾಯ ತೆರಿಗೆ ಇಲಾಖೆ ಮತ್ತೊಂದು ನೋಟಿಸ್ ಜಾರಿ ಮಾಡಿದೆ. ತೆರಿಗೆ ತುಂಬದ ಹಿನ್ನೆಲೆಯಲ್ಲಿ 126.68 ಕೋಟಿ ರೂ.ದಂಡ ಮತ್ತು ಬಡ್ಡಿ ತುಂಬುವಂತೆ, ಇದರಲ್ಲಿ ಮೊದಲ ಕಂತು 67 ಕೋಟಿ ರೂ.ಗಳನ್ನು 15 ದಿನದಲ್ಲಿ ಪಾವತಿಸುವಂತೆ ಸೂಚಿಸಿದೆ. ಒಟ್ಟಾರೆ 578 ಕೋಟಿ ರೂ. ಆದಾಯ ತೆರಿಗೆ ಇಲಾಖೆ ಪಾಲಾಗಲಿದೆ. ಇದರಿಂದಾಗಿ ವಿವಿ ಸ್ಥಿತಿ ಬೆಂಕಿಯಿಂದ ಬಾಣಲೆಗೆ ಬಿದ್ದಂತಾಗಿದೆ.




## ವ್ಯರ್ಥ ಯೋಜನೆಗಳು

- ವಿವಿ ಅವ್ಯವಹಾರ ತನಿಖೆ ನಡೆಸಿದ ಏಕಸದಸ್ಯ ಸಮಿತಿ 27 ಲೋಪಗಳನ್ನು ಪತ್ತೆ ಮಾಡಿದೆ. ಇವು ಕೆಲವು ಸ್ಯಾಂಪಲ್.
- ಆನ್‌ಲೈನ್ ಲರ್ನಿಂಗ್ ಸಿಸ್ಟಂ 'ಇ-ವಿದ್ಯಾ' ಹೆಸರಲ್ಲಿ 306.62 ಕೋಟಿ ರೂ. ಖರ್ಚು
- ವಿವಿ ಕ್ಯಾಂಪಸ್‌ಗೆ ನೀರು ಸರಬರಾಜು ಯೋಜನೆ ಹೆಸರಲ್ಲಿ 331.62 ಕೋಟಿ ವೆಚ್ಚ
- ನಿಶ್ಚಿತ ಠೇವಣಿಯಲ್ಲಿ 1.14 ಕೋಟಿ ರೂ. ಆದಾಯ ನಷ್ಟ
- ಸಾಫ್ಟ್‌ವೇರ್ ಖರೀದಿ, ಲ್ಯಾಬೊರೇಟರಿಗಾಗಿ 75.49 ಲಕ್ಷ ರೂ. ಖರ್ಚು

## ಕೇಂದ್ರ ಸರಕಾರದ ಮಧ್ಯಪ್ರವೇಶ ಅನಿವಾರ್ಯ

ನಿಯಮಾವಳಿ ಪ್ರಕಾರ ರಾಜ್ಯ ಸರಕಾರದಿಂದ ಶೇ. 60ರಷ್ಟು ಅನುದಾನ ಪಡೆಯುವ ಶಿಕ್ಷಣ ಸಂಸ್ಥೆ ಆದಾಯ ತೆರಿಗೆ ಇಲಾಖೆ ವ್ಯಾಪ್ತಿಗೆ ಬರುವುದಿಲ್ಲ. ಆದರೆ ವಿಟಿಯು ಆದಾಯ ಸಾಕಷ್ಟು ಇರುವ ಹಿನ್ನೆಲೆಯಲ್ಲಿ ರಾಜ್ಯ ಸರಕಾರದ ಅನುದಾನ ಪಡೆದಿರಲಿಲ್ಲ. ಇದೇ ಮುಳುವಾಗಿ ಪರಿಣಮಿಸಿದೆ. ವಿವಿಯನ್ನು ಈಗಿನ ಆರ್ಥಿಕ ಸಂಕಷ್ಟದಿಂದ ಪಾರು ಮಾಡಲು ಕೇಂದ್ರದಿಂದ ಮಾತ್ರ ಸಾಧ್ಯ. ಆದಾಯ ತೆರಿಗೆಯನ್ನೂ ಸಂಪೂರ್ಣ ಮನ್ನಾ ಮಾಡುವ ಮೂಲಕ ವಿವಿಗೆ ಜೀವ ತುಂಬಬೇಕಿದೆ.

## ಕಾಮಗಾರಿಗಳನ್ನು ಮೈಮೇಲೆ ಎಳೆದುಕೊಂಡ ವಿವಿ

ವಿಟಿಯು ಆರ್ಥಿಕ ಸಂಕಷ್ಟಕ್ಕೆ ಮತ್ತೊಂದು ಕಾರಣ 4 ಸರಕಾರಿ ಕಾಲೇಜುಗಳಿಗೆ ತಲಾ 20 ಕೋಟಿ ರೂ.ಆರ್ಥಿಕ ಸಹಾಯ ಮಾಡಿದ್ದು ಮತ್ತು ದಾವಣಗೆರೆ ಕಾಲೇಜನ್ನು ವಹಿಸಿಕೊಂಡಿದ್ದು. ದಾವಣಗೆರೆ ಕಾಲೇಜಿಗೆ 100 ಕೋಟಿ ರೂ. ಖರ್ಚು ಮಾಡಿದ್ದಲ್ಲದೆ ಪ್ರತಿ ತಿಂಗಳ ವೇತನ ಮತ್ತು ನಿರ್ವಹಣೆ ಹೊಣೆ ವಿಟಿಯು ಮೇಲೆ ಬಿದ್ದಿದೆ. ಜ್ಞಾನ ಸಂಗಮ ಆವರಣದಲ್ಲಿ ಸೌತ್ ಬ್ಲಾಕ್ ನಿರ್ಮಾಣ ಸೇರಿದಂತೆ 2011ರ ನಂತರ ತೆಗೆದುಕೊಂಡ ಸುಮಾರು 500 ಕೋಟಿ ರೂ. ವೆಚ್ಚದ ಕಟ್ಟಡ ಕಾಮಗಾರಿಗಳ್ಯಾವುವೂ ಅನಿವಾರ್ಯವಾಗಿರಲಿಲ್ಲ.

# Prof Sabiha new VC of women's university

**VIJAYAPURA:** Governor Vajubhai Vala on Saturday issued order appointing Prof Sabiha, Kannada professor in Mangalore University, as Vice-Chancellor of Karnataka State Women's University (KSWU).

Prof Sabiha will assume the office of Vice-Chancellor of Vijayapura-based university on Monday, sources in KSWU told *Deccan Herald*.

An expert committee led by former Bangalore University vice-chancellor K Siddappa, had recommended three names for the post. Apart from Prof Sabiha, the committee had suggested the names of Prof Pushpa Savadatti of Central University in Kalaburagi and Prof Usharani of Mass Communication and Journalism department in Mysore University.

Prof Sabiha, who has made a mark in poetry and research writing, is currently working as in-charge director of Mangalore University study centre near Kushalnagar.

**DH News Service**